ಕರ್ನಾಟಕ ಸರ್ಕಾರ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

# ಅಲ್ಪಸಂಖ್ಯಾತರ ನಿರ್ದೇಶನಾಲಯ

20 ಮತ್ತು 21ನೇ ಮಹಡಿ, ವಿ.ವಿ. ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
ವೆಬ್‌ಸೈಟ್: https://gokdom.kar.nic.in or https://dom.karnataka.gov.in

| ಮುಸ್ಲಿಮರು | ಕ್ರಿಶ್ಚಿಯನ್ನರು | ಸಿಖ್ಖರು | ಬೌದ್ಧರು | ಪಾರ್ಸಿಗಳು | ಜೈನರು |
|---|---|---|---|---|---|

## ರಾಷ್ಟ್ರೀಯ ವಿದ್ಯಾರ್ಥಿ ವೇತನ ಪೋರ್ಟಲ್ 2020-21ರ ಅನ್ವಯ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿಕೆ ಬಗ್ಗೆ ಪ್ರಕಟಣೆ

**ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಅಲ್ಪಸಂಖ್ಯಾತರ ನಿರ್ದೇಶನಾಲಯವು ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ, ನವದೆಹಲಿ ಇದರ ಸಹಭಾಗಿತ್ವದೊಂದಿಗೆ 2020-21ರ ಸಾಲಿಗೆ ವಿದ್ಯಾರ್ಥಿ ವೇತನ ನೀಡಿಕೆ ಬಗ್ಗೆ ಪ್ರಕಟಪಡಿಸಿದೆ.

| ವೇಳಾಪಟ್ಟಿ | ಅರ್ಹತೆ |
|---|---|
| ವಿದ್ಯಾರ್ಥಿಗಳು ಹೊಸದಾಗಿ ವಿದ್ಯಾರ್ಥಿ ವೇತನ ಪಡೆಯಲು ಮತ್ತು ಈಗಾಗಲೇ ವಿದ್ಯಾರ್ಥಿ ವೇತನ ಪಡೆಯುತ್ತಿರುವವರು ನವೀಕರಣಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ<br>I. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ<br>II. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ<br>III. ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ<br>**31ನೇ ಅಕ್ಟೋಬರ್ 2020** | • ಅಭ್ಯರ್ಥಿಯು ಕಳೆದ ವಾರ್ಷಿಕ ಮಂಡಳಿ/ತರಗತಿ ಪರೀಕ್ಷೆಯಲ್ಲಿ 50% ಅಂಕಗಳನ್ನು ಗಳಿಸಿರಬೇಕು (1ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಇದು ಅನ್ವಯವಾಗುವುದಿಲ್ಲ).<br>• ವಿದ್ಯಾರ್ಥಿಯ ಪಾಲಕರ/ಪೋಷಕರ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಈ ಕೆಳಗೆ ತಿಳಿಸಿರುವುದಕ್ಕಿಂತಲೂ ಹೆಚ್ಚಿರಬಾರದು.<br>✓ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ರೂ.1 ಲಕ್ಷ<br>✓ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ರೂ.2 ಲಕ್ಷ<br>✓ ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನಕ್ಕೆ ರೂ.2.5 ಲಕ್ಷ<br>• ವಿದ್ಯಾರ್ಥಿಯು ಕರ್ನಾಟಕ ರಾಜ್ಯದವರಾಗಿರಬೇಕು.<br>• ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳೂ ಸಹ ಕರ್ನಾಟಕದಲ್ಲಿ ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುವರು. |

### ಅಭ್ಯರ್ಥಿಗಳಿಗೆ ಸೂಚನೆ

- ಅಭ್ಯರ್ಥಿಗಳು ಮೇಲೆ ತಿಳಿಸಿರುವ ಯಾವುದಾದರು ಒಂದು ವಿದ್ಯಾರ್ಥಿವೇತನ ಯೋಜನೆಗೆ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್‌ನ ವೆಬ್‌ಸೈಟ್: **www.scholarships.gov.in** ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಲಾಗಿದೆ (ಸದರಿ ವೆಬ್‌ಸೈಟ್‌ಗೆ ಲಿಂಕ್ **www.gokdom.kar.nic.in** ಅಥವಾ **www.dom.karnataka.gov.in** ನಲ್ಲಿ ಸಹ ದೊರೆಯುವುದು).
- ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಮತ್ತು ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನಗಳ ಅಡಿಯಲ್ಲಿ ಒಳಪಡುವ ಕೋರ್ಸುಗಳ ಪಟ್ಟಿಯು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ದೊರೆಯುವುದು.
- ಅಭ್ಯರ್ಥಿಗಳು ಆಂಡ್ರಾಯ್ಡ್ ಮೊಬೈಲ್ ಆ್ಯಪ್-ನ್ಯಾಷನಲ್ ಸ್ಕಾಲರ್‌ಶಿಪ್ (ಎನ್‌ಎಸ್‌ಪಿ) ಮೂಲಕವೂ ಸಹ ಅರ್ಜಿ ಸಲ್ಲಿಸಬಹುದು.
- ಆನ್‌ಲೈನ್ ಅರ್ಜಿ ಸಲ್ಲಿಸುವ ಬಗ್ಗೆ ವಿವರವಾದ ಸೂಚನೆಗಳು/ಕ್ರಮಾವಳಿಗಳು ಮತ್ತು ಪದೇ ಪದೇ ಕೇಳುವ ಪ್ರಶ್ನೆಗಳು (ಎಫ್‌ಎಕ್ಯೂಗಳು) **www.gokdom.kar.nic.in** ಅಥವಾ **www.dom.karnataka.gov.in** ರಲ್ಲಿ ದೊರೆಯುವುದು.

### ಶಿಕ್ಷಣ ಸಂಸ್ಥೆಗಳಿಗೆ ಸೂಚನೆ

- ಅಲ್ಪಸಂಖ್ಯಾತರ ಸಮುದಾಯಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿಶ್ವವಿದ್ಯಾಲಯಗಳು/ಶಿಕ್ಷಣ ಸಂಸ್ಥೆಗಳು/ಕಾಲೇಜುಗಳು/ಶಾಲೆಗಳು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್‌ನಲ್ಲಿ (ಎನ್‌ಎಸ್‌ಪಿ) ಕಡ್ಡಾಯವಾಗಿಯೇ ನೋಂದಾಯಿಸಿಕೊಳ್ಳತಕ್ಕದ್ದು (ಈ ಮೊದಲು ನೋಂದಾಯಿಸಿಕೊಳ್ಳದಿದ್ದಲ್ಲಿ).
- ಸಂಸ್ಥೆಗಳ ನೋಂದಣಿ ಮಾಡಿಸುವ ಬಗ್ಗೆ ಮತ್ತು ಅರ್ಜಿಗಳನ್ನು ಪರಿಶೀಲನೆ ಮಾಡುವ ಬಗ್ಗೆ ವಿವರವಾದ ಸೂಚನೆಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್: **https://gokdom.kar.nic.in** ಅಥವಾ **https://dom.karnataka.gov.in** ರಲ್ಲಿ ದೊರೆಯುವುದು.

- ಹೆಚ್ಚಿನ ವಿವರಗಳಿಗಾಗಿ ನಿಮ್ಮ ಸಂಬಂಧಪಟ್ಟ ಜಿಲ್ಲಾ ಉರ್ದು ಇಸಿಒ/ತಾಲ್ಲೂಕು ಉರ್ದು ಬಿಆರ್‌ಪಿ ಇವರನ್ನು - ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ, ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ/ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು (ಎಂಐಸಿ) - ಮೆಟ್ರಿಕ್ ನಂತರದ ಮತ್ತು ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನಕ್ಕಾಗಿ ಸಂಪರ್ಕಿಸಬಹುದು.

ಹೆಚ್ಚಿನ ವಿವರವಾದ ಸೂಚನೆಗಳು ಮತ್ತು ಕ್ರಮಾವಳಿಗಳ ಬಗ್ಗೆ ತಿಳಿಯಲು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ **https://gokdom.kar.nic.in** ಅಥವಾ **https://dom.karnataka.gov.in** ನೋಡಿ.

**ಪ್ರಮುಖ ಸೂಚನೆ:**

1. ಕರ್ನಾಟಕದಲ್ಲಿರುವ ಅಲ್ಪಸಂಖ್ಯಾತರು ವಿದ್ಯಾರ್ಥಿವೇತನ ಪಡೆದುಕೊಳ್ಳಲು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್-ಎನ್‌ಎಸ್‌ಪಿ (ಜಿಒಐ) ಮತ್ತು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್-ಎಸ್‌ಎಸ್‌ಪಿ (ಜಿಒಕೆ) ಈ ಎರಡೂ ಯೋಜನೆಗಳ ಅಡಿಯಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯ.
2. ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (ಎಸ್‌ಎಸ್‌ಪಿ) ಅಡಿಯಲ್ಲಿ ವಿದ್ಯಾರ್ಥಿ ವೇತನ ಪ್ರಕಟಣೆಯನ್ನು ಮುಂದೆ ನೀಡಲಾಗುವುದು.

ಸಹಿ/- ಮಹಿಬೂಬ್ ಪಾಷ, ಕೆ.ಎ.ಎಸ್.
ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ದಿನಾಂಕ: 04/10/2020
ಬೆಂಗಳೂರು